ಶಿವ ರೊಟ್ಟಿಯನ್ನು ಆ ಬಾಲಕನಿಗೆ ಕೊಟ್ಟನು. ಆಮೇಲೆ ಆ ವೃದ್ಧೆಗೂ, ವೃದ್ಧನಿಗೂ ತಿನ್ನಿಸಿದನು. ಹಸಿದು ಮಲಗಿದ್ದ ಅವರಿಗೆ ಹೋದ ಜೀವ ಬಂದಂಗಾಯ್ತು. ಶಿವ ಕೂಡಲೇ ವೃದ್ಧನನ್ನು ಕೇಳಿಕೊಂಡು ಹತ್ತಿರವಿದ್ದ ಅಂಗಡಿಗೆ ಹೋಗಿ ದವಸ ಧಾನ್ಯ ಅಕ್ಕಿ ಬೇಳೆ ತರಕಾರಿ ಮುಂತಾದ ಅಡುಗೆಗೆ ಬೇಕಾದ ಪದಾರ್ಥಗಳನ್ನೆಲ್ಲಾ ಕೊಂಡುಕೊಂಡು ಬಂದನು. ವೃದ್ಧೆ ಮೆಲ್ಲಗೆ ಎದ್ದು ಅಡುಗೆ ಮಾಡಿದಳು. ಎಲ್ಲರೂ ಕೂತು ಊಟ ಮಾಡಿದರು. ಶಿವನಿಗೆ ಆ ವೃದ್ಧ ತನ್ನ ಈ ಕುಟುಂಬದ ಸ್ಥಿತಿಗೆ ಏನು ಕಾರಣ, ಯಾಕೆ ಹೀಗಾಯ್ತು ಎಂಬ ಕಥೆಯನ್ನೆಲ್ಲಾ ಹೇಳಿದ:

ಸಕಾಲಕ್ಕೆ ಸರಿಯಾಗಿ ಮಳೆಯಾಗುತ್ತಿದ್ದಾಗ ತಾನು, ತನ್ನ ಮಗ ತನಗೆ ಇದ್ದ ಅಲ್ಪಸ್ವಲ್ಪ ಭೂಮಿಯಲ್ಲಿ ಬೆಳೆ ಬೆಳೆದುಕೊಂಡು ಜೀವನ ಸಾಗಿಸುತ್ತಿದ್ದರು. ಆದರೆ ಮಳೆ ಹೋಗಿ ಬರ ಬಂದು ಮೂರು ವರ್ಷವಾಯ್ತು. ಬಿತ್ತಿದ್ದ ಬೆಳೆಯೂ ಕೈಗೆ ಬರಲಿಲ್ಲ. ಆಮೇಲೆ ಅನಿವಾರ್ಯವಾಗಿ ಅಪ್ಪ-ಮಗ ಇಬ್ಬರೂ ಊರಿನಲ್ಲಿ ಅವರಿವರ ಹೊಲ ಮನೆಗಳಲ್ಲಿ ಸಿಗುತ್ತಿದ್ದ ಕೂಲಿನಾಲಿ ಮಾಡಿ ಬದುಕುತ್ತಿದ್ದರು. ಆದರೆ ಕೂಲಿಯೂ ಸಿಗುವುದು ನಿಂತುಹೋಯ್ತು. ಅವರಿವರು ತಮಗೆ ಕೊಡುತ್ತಿದ್ದ ಸಾಲದ ದವಸಧಾನ್ಯವೂ ಅವರಿಗೇ ಇಲ್ಲದಂತಾಗಿ ನಿಂತುಹೋಯ್ತು. ಆಗ ಅವರಿಗೆ ತಾವು ಜೀವನ ನಡೆಸುವುದು ತುಂಬಾ ಕಷ್ಟವೆನಿಸಿತು. ಮಗ-ಸೊಸೆ ಇಬ್ಬರೂ ಈ ಬವಣೆಯನ್ನು ನೋಡಿ ಸಣ್ಣಪುಟ್ಟ ಕೆಲಸ ಹುಡುಕಲು ಪಟ್ಟಣಕ್ಕೆ ಹೊರಟು ಹೋದರು. ಅವರು ಎಲ್ಲಿದ್ದಾರೆ, ಹೇಗಿದ್ದಾರೆ ಎಂಬುದರ ಬಗ್ಗೆ ಅವರಿಗೆ ಸುದ್ದಿಯೇ ಇಲ್ಲ. ಈ ಹೈದನಿಗಾಗಿ ಆ ವೃದ್ಧರೂ ಇಷ್ಟುದಿನ ಹೋರಾಟ ಮಾಡಿ ಬದುಕಿದ್ದರು. ಇನ್ನು ಮೇಲೆ ಅವರ ಕೈಯಿಂದ ಏನೂ ಆಗಲ್ಲ ಅನ್ನಿಸಿದರಿಂದ ಮೂರು ದಿನಗಳಿಂದ ಹಸಿದು ಮಲಗಿದ್ದರು. ಆ ಹೈದನೂ ಮೂರುದಿನದಿಂದ ಹಸಿದು ಅವರ ಜೊತೆಯಲ್ಲಿಯೇ ಸುಮ್ಮನೆ ಮಲಗಿದ್ದ.

'ನೀನು ಎಲ್ಲಿದ್ದೋ? ನಮ್ಮ ಪಾಲಿಗೆ ದೇವರು ಬಂದಂಗೆ ಬಂದೆ. ಆ ದೇವರೇ ನಮ್ಮ ಕಷ್ಟ ನೋಡಿ ನಿನ್ನನ್ನು ನಮ್ಮ ಬಳಿಗೆ ಕಳಿಸಿರಬೇಕು. ನಿನ್ನದು ಯಾವೂರಪ್ಪ? ಎಲ್ಲಿಂದ ಬಂದೆ?' ಎಂದು ವೃದ್ಧ ಶಿವನನ್ನು ಕೇಳಿದ.

ವೃದ್ಧನ ಈ ಕಥೆಯನ್ನು ಶಿವ ಕೇಳಿದ ನಂತರ ತಾನು ತನ್ನ ಜೊತೆಗಾರ ರಾಮನನ್ನು ಹಿಂಬಾಲಿಸಿ ಕಾಶಿಗೆ ಹೋಗುವ ಯೋಚನೆಯನ್ನೇ ಆತ ಮರೆತುಬಿಟ್ಟನು. ಆಮೇಲೆ ಆತ ಆ ವೃದ್ಧ ದಂಪತಿಗಳ ಜೊತೆಯೇ ಇದ್ದು, ಅವರ ಮನೆಗೆಲಸಗಳನ್ನೆಲ್ಲಾ ಮಾಡಿಕೊಂಡು, ಅವರ ಆರೈಕೆ ಮಾಡಿಕೊಂಡು ನಿಂತುಬಿಟ್ಟನು.

ಶಿವನ ಸೇವೆಯಿಂದ ಆ ವೃದ್ಧ ದಂಪತಿಗಳ ಕುಟುಂಬ ದಿನೇದಿನೇ ಗಟ್ಟಿಯಾಗತೊಡಗಿತು. ಅವರು ಸುಧಾರಿಸಿಕೊಂಡು ಎದ್ದು ಲಗುಬಗೆಯಿಂದ ಓಡಾಡುವಂತಾದರು. ಆ ವೃದ್ಧನೂ ಮೂಲತಃ ಒಬ್ಬ ರೈತನಾಗಿದ್ದ. ಅವನಿಗೆ ಕೃಷಿಯ ಬಗ್ಗೆ ಆಳವಾದ



ತಿಳಿವಳಿಕೆ ಇತ್ತು. ಸಕಾಲಕ್ಕೆ ಮಳೆಯಾದರೆ ಕೃಷಿಯಲ್ಲಿ ಏನೆಲ್ಲಾ ಬೆಳೆಯಬಹುದು ಎಂಬುದರ ಬಗ್ಗೆ ಅವನಿಗೆ ಅನೇಕ ಕನಸುಗಳಿದ್ದವು. ಆದರೆ ಅವನಿಗೆ ಅದಕ್ಕೆ ಬೇಕಾದ ಆರ್ಥಿಕ ಬೆಂಬಲ ಇರಲಿಲ್ಲ. ಆ ರೈತ ಈಗ ಕೈಚೆಲ್ಲಿ ಕುಳಿತು ಕಷ್ಟವನ್ನು ಅನುಭವಿಸುತ್ತಿದ್ದಾನೆಂದು, ಅವನ ಮಗ ಸೊಸೆ ದಿಕ್ಕು ಕಾಣದೆ ಜೀವನಕ್ಕಾಗಿ ಪಟ್ಟಣ ಸೇರಿದ್ದಾರೆಂದು ಶಿವನಿಗೆ ಮನವರಿಕೆಯಾಯಿತು. ಆತ ತನ್ನ ಕಷ್ಟಕ್ಕಾಗಿ ತನಗೆ ಇದ್ದ ಸ್ವಲ್ಪ ಜಮೀನನ್ನು ಕಳೆದ ವರ್ಷ ತನ್ನ ಊರಿನ ಯಜಮಾನನಿಗೆ ಪರಭಾರೆ ಮಾಡಿದ್ದನು. ವ್ಯವಸಾಯದ ಎತ್ತುಗಳನ್ನೂ ಮಾರಿಕೊಂಡಿದ್ದನು. ಇಟ್ಟಿದ್ದ ಬಿತ್ತನೆ ಬೀಜವೂ